ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

UNIVERSITY OF HORTICULTURAL SCIENCES, BAGALKOT

**ದಿನಾಂಕ 28-06-2019 ರಂದು ಮಧ್ಯಾಹ್ನ 3:00 ಗಂಟೆಗೆ ಕೊಠಡಿ ಸಂಖ್ಯೆ 252, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ 51ನೇ ಸಭೆಯ ನಡುವಳಿಗಳು**

# MINUTES OF 51ST MEETING OF THE BOARD OF MANAGEMENT HELD ON 28-06-2019 AT 3.00 PM IN ROOM NO. 252, M. S. BUILDING, BENGALURU

ವ್ಯವಸ್ಥಾಪನ ಮಂಡಳಿಯ ಎಲ್ಲ ಸದಸ್ಯರುಗಳಿಗೆ ಮುಂಚಿತವಾಗಿ ತಿಳಿಸಿರುವ ಸಮಯಕ್ಕೆ ಸರಿಯಾಗಿ ದಿನಾಂಕ 28-06-2019 ರಂದು ಮಧ್ಯಾಹ್ನ 3.00 ಗಂಟೆಗೆ ಕೊಠಡಿ ಸಂಖ್ಯೆ 252, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇಲ್ಲಿ ನಡೆದ ವ್ಯವಸ್ಥಾಪನ ಮಂಡಳಿಯ 51ನೇ ಸಭೆಯಲ್ಲಿ ಈ ಕೆಳಗಿನ ಸದಸ್ಯರುಗಳು ಭಾಗವಹಿಸಿದ್ದರು.

The following members were participated for the 51st Meeting of the Board of Management held on 28-06-2019 at 3.00 pm in the Room No. 252, M. S. Building, Bengaluru as per time schedule communicated to all the members well in advance.

**ಹಾಜರಾದ ಸದಸ್ಯರು**

**MEMBERS PRESENT**

| | | | |
|---|---|---|---|
| 1. | ಡಾ. ಕೆ. ಎಂ. ಇಂದಿರೇಶ<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟ. | : | ಅಧ್ಯಕ್ಷರು |
| | **Dr. K. M. Indiresh**<br>Vice-Chancellor and Chairman<br>Board of Management, UHS, Bagalkot. | : | Chairman |
| 2 | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ.<br>ಸರ್ಕಾರದ ಕಾರ್ಯದರ್ಶಿಗಳು ಹಾಗೂ ಸದಸ್ಯರು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೋಟಗಾರಿಕೆ ಇಲಾಖೆ, ಎಂ. ಎಸ್. ಬಿಲ್ಡಿಂಗ್, ಬೆಂಗಳೂರು-560 001. | : | ಸದಸ್ಯರು |
| | **Sri Rajender Kumar Kataria,** I.A.S.,<br>Secretary GOK and Member,<br>Board of Management, UHS, Bagalkot,<br>Department of Horticulture,<br>M.S. Building, Bengaluru-560001. | : | Member |
| 3 | ಶ್ರೀಮತಿ ಪದ್ಮಾವತಿ<br>ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಪ್ರತಿನಿಧಿಗಳು ಮತ್ತು<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು-560 001. | : | ಸದಸ್ಯರು |
| | **Mrs. Padmavathi**<br>Additional Secretary to GOK, Dept. of Finance<br>Representative of Principal Secretary GOK and<br>Member, Board of Management, UHS,<br>Bagalkot, Department of Finance, Vidhana<br>Soudha, Bengaluru-560001. | : | Member |

| | | | |
|---|---|---|---|
| 4. | ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ<br>ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೂಪಲ್ಲಿ ಗ್ರಾಮ, ಜೆ. ತಿಮ್ಮಸಂದ್ರ ಪೋಸ್ಟ್<br>ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | : | ಸದಸ್ಯರು |
| | **Sri R. Chowda Reddy Thoopalli**<br>Member of Legislative Council and Member<br>Board of Management, UHS, Bagalkot<br>Tupalli Village, J. Timmasandra Post<br>Srinivaspur Taluka, Kolar District. | : | Member |
| 5. | ಡಾ. ಎಂ. ವಿ. ವೆಂಕಟೇಶ, ಭಾ.ಆ.ಸೇ.,<br>ತೋಟಗಾರಿಕೆ ನಿರ್ದೇಶಕರು ಮತ್ತು ಸದಸ್ಯರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟ, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್,<br>ಬೆಂಗಳೂರು-560004. | : | ಸದಸ್ಯರು |
| | **Dr. M. V. Venkatesh,** I.A.S.,<br>Director of Horticulture and Member,<br>Board of Management, UHS Bagalkot,<br>Dept. of Horticulture, Lalbagh,<br>Bengaluru-560004. | : | Member |
| 6. | ಡಾ. ಎನ್. ರಾಜೇಶ್ವರಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 36, ಬೇವುಬೆಲ್ಲ, 1ನೇ ಕ್ರಾಸ್, ವಿದ್ಯಾನಗರ,<br>ಶಿವಮೊಗ್ಗ-577203. | : | ಸದಸ್ಯರು |
| | **Dr. N. Rajeshwari**<br>Member, Board of Management, UHS, Bagalkot<br>No. 36, Bevubella, 1st Cross, Vidyanagara,<br>Shivamogga-577203. | : | Member |
| 7. | ಶ್ರೀ ಶಂಕರಪ್ಪ ಬಸಪ್ಪ ಮಳಲಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮು:ಪೋ: ಉತೂರು, ತಾ: ಮುಧೋಳ, ಜಿ: ಬಾಗಲಕೋಟ | : | ಸದಸ್ಯರು |
| | **Sri. Shankarappa Basappa Malali**<br>Member, Board of Management, UHS, Bagalkot<br>Mu:Po: Utturu, Mudhol Taluka, Dist: Bagalkot | : | Member |
| 8. | ಶ್ರೀ ಎಸ್. ಎನ್. ಮಂಜುನಾಥಗೌಡ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ ದಳಸನೂರು,<br>ಮದನಹಳ್ಳಿ ಪಂಚಾಯಿತು-563126, ತಾಲ್ಲೂಕು ಮತ್ತು ಜಿಲ್ಲೆ: ಕೋಲಾರ. | : | ಸದಸ್ಯರು |
| | **Sri S. N. Manjunathagowda**<br>S/o. Late Nanjappa<br>Member, Board of Management,<br>UHS, Bagalkot<br>Shettymadamangala Village, Velagalaburre<br>Post, Via Dalasanur, Madanahally Panchayath-<br>563126, Tq & Dist : Kolar | : | Member |

| | | | |
|---|---|---|---|
| 9. | ಶ್ರೀ ಆರ್. ಎಂ. ನಾಗೇಶ್<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 25, ಜುಬಿಲಿ ಶಾಲೆ ಹತ್ತಿರ, ಪಾಪರೆಡ್ಡಿಪಾಳ್ಯ, ನಾಗರಬಾವಿ,<br>ಬೆಂಗಳೂರು-560 072. | : | ಸದಸ್ಯರು |
| | **Sri R. M. Nagesh**<br>Member, Board of Management, UHS, Bagalkot<br>No. 25, Near Jubilee School, Papareddy Palya,<br>Nagarbhavi, Bengaluru-560 072. | : | Member |
| 10. | ಡಾ. ಯೋಗಿರಾಜ ಬಿ. ಪಾಟೀಲ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 142, "ಸದ್ಗುರು", 5ನೇ ಕ್ರಾಸ್, ಕುಸುಮನಗರ ಮುಖ್ಯ ರಸ್ತೆ, ವೈದ್ಯ<br>ಮಠ ಸಂಕೀರ್ಣ ಹಿಂದುಗಡೆ, ಧಾರವಾಡ-580008. | : | ಸದಸ್ಯರು |
| | **Dr. Yogiraj B. Patil**<br>Member, Board of Management, UHS, Bagalkot<br>No. 142, "Sadguru", 5th Cross<br>Kusumnagar Main Road, Backside of Vaidya<br>Math Complex, Dharwad-580008. | : | Member |
| 11. | ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶಿವನಗರ, ಸವದತ್ತಿ ರಸ್ತೆ, ಮುರುಘಾ ಮಠದ ಹತ್ತಿರ,<br>ಧಾರವಾಡ – 581208. | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS,<br>Bagalkot, Shivanagar, Savadatti Road,<br>Near Muruga Math, Dharwad-581208. | : | Member |
| 12. | ಡಾ. ಕೆ. ಎಮ್. ಇಂದಿರೇಶ<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯರು |
| | **Dr. K. M. Indiresh**<br>Director of Education and Member<br>Board of Management, UHS, Bagalkot | : | Member |
| 13. | ಡಾ. ಟಿ. ಬಿ. ಅಳ್ಳೊಳ್ಳಿ<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯ ಕಾರ್ಯದರ್ಶಿಗಳು |
| | **Dr. T. B. Allolli**<br>Registrar & Member-Secretary,<br>Board of Management,<br>UHS, Bagalkot. | : | Member Secretary |

ಮಧ್ಯಾಹ್ನ 3.00 ಗಂಟೆಗೆ ಅಧಿಕಾರಿ ಸದಸ್ಯರು (06) ಸಭೆಗೆ ಹಾಜರಾದರು. ಆದರೆ, ಅಧ್ಯಕ್ಷರು ಅಧಿಕಾರೇತರ ಸದಸ್ಯರು ಹಾಜರಾಗುವವರೆಗೆ ಕಾಯಲು ಸಭೆಗೆ ಹಾಜರಾದ ಸದಸ್ಯರಲ್ಲಿ ವಿನಂತಿಸಿದರು. ಅಧ್ಯಕ್ಷರ ವಿನಂತಿ ಮೇರೆಗೆ ಮಂಡಳಿಯ ಅಧಿಕಾರೇತರ ಸದಸ್ಯರುಗಳು ಬರುವಿಕೆಗಾಗಿ ಮಧ್ಯಾಹ್ನ 3.15 ರವರೆಗೆ ಕಾಯ್ದರು. ತೋವಿವಿ ಅಧಿನಿಯಮ, 2009 ರ ಕಲಂ. 12(5) ರ ಅನುಸಾರ, ಮಂಡಳಿಯ ಸಭೆಗಾಗಿ ಮಂಡಳಿಯ ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರ ಸಭೆಯ ಕೋರಂ ಆಗಿರತಕ್ಕದ್ದು, ಒಟ್ಟು 17 ಸದಸ್ಯರ ಪೈಕಿ, 6 ಸದಸ್ಯರುಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಅದರಂತೆ, ಎಲ್ಲ ಸದಸ್ಯರುಗಳಿಗೆ ಕುಲಸಚಿವರು ಮತ್ತು ಕುಲಪತಿಗಳ ಸ್ವಾಗತದೊಂದಿಗೆ ಸಭೆಯು ಮಧ್ಯಾಹ್ನ 3.15 ಗಂಟೆಗೆ ಪ್ರಾರಂಭಗೊಂಡಿತು. ಇದರೊಂದಿಗೆ, ವ್ಯವಸ್ಥಾಪನಾ ಮಂಡಳಿಯ 07 ಅಧಿಕಾರೇತರ ಸದಸ್ಯರುಗಳು ಮಧ್ಯಾಹ್ನ 3.40 ಗಂಟೆಗೆ ಸಭಾ ಕೊಠಡಿಯಲ್ಲಿ ಪ್ರವೇಶಿಸಿದರು ಮತ್ತು ಸಭೆಯು ಇವರುಗಳು ಅನುಪಸ್ಥಿತಿಯಲ್ಲಿ ಮಧ್ಯಾಹ್ನ 3.15 ಗಂಟೆಗೆ ಪ್ರಾರಂಭಿಸಿರುವುದರ ವಿರುದ್ಧ ಪ್ರತಿಭಟಿಸಿ ಕೂಡಲೇ ಸಭಾ ಕೊಠಡಿಯಿಂದ ಹೊರನಡೆದರು.

ಎಲ್ಲ ಸದಸ್ಯರುಗಳಿಗೆ ಪೂರ್ವಭಾವಿಯಾಗಿ ಸಲ್ಲಿಸಿದ ಕಾರ್ಯಸೂಚಿ ಅನುಸಾರ, ಸಭೆಯು ಒಟ್ಟು 12 ಕಾರ್ಯಸೂಚಿಗಳನ್ನು ಒಳಗೊಂಡಿರುತ್ತದೆ ಮತ್ತು ಸಂ. 01 ರಿಂದ 06 ರವರೆಗಿನ ಕಾರ್ಯಸೂಚಿಗಳು ಈ ಹಿಂದಿನ ಮೂರು ಸಭೆಗಳ ನಡುವಳಿಗಳ ಧೃಡೀಕರಣ ಮತ್ತು ಕೈಗೊಂಡ ಕ್ರಮಗಳ ವರದಿಗಳನ್ನು ಮಧ್ಯಾಹ್ನ 3.15 ಗಂಟೆಗೆ ಪ್ರಾರಂಭವಾದ ಸಭೆಗೆ ಕುಲಸಚಿವರು ಮಂಡಿಸಿದರು. ಅಧ್ಯಕ್ಷರು ಇನ್ನುಳಿದ ಸದಸ್ಯರುಗಳು ಬರುವವರೆಗೆ ಇನ್ನು ಸ್ವಲ್ಪ ಸಮಯ ಕಾಯುವಂತೆ ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ಇವರಲ್ಲಿ ವಿನಂತಿಸಿದರು. ಆದರೆ, ಸರ್ಕಾರದ ಕಾರ್ಯದರ್ಶಿಗಳು, ಸಭೆಯ ಕೋರಂವಾಗಿದ್ದು, ಸಭೆಯನ್ನು ಪ್ರಾರಂಭಿಸಲು ತಿಳಿಸಿದರು. ಕೆಳಗಿನಂತೆ ವಿವರವಾದ ಚರ್ಚೆಗಳು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

The official members (06) were present in the meeting at 3.00 pm. But, the Chairman requested the members who were present in the meeting to wait till the arrival of the non-official members. As per the request of the Chairman, Board waited till 3.15 pm for arrival of non-official members. As per section 12 (5) of UHS Act 2009, one third of the members of the Board shall form a quorum at a meeting of the Board. Out of 17 members, 06 members were participated in the meeting. Accordingly, the meeting was started at 3.15 pm with the welcome speech by the Registrar and Vice-Chancellor for all the members who were present in the meeting. In addition to this, 07 non-official members of the Board of Management entered in meeting hall at 3.40 pm, but immediately left the meeting hall in protest against the start of Board of Management at 3.15 pm without their presence.

As per the agenda served to all the members well in advance, there were total 12 items for the meeting and Item No. 01 to 06 were pertaining to confirmation and action taken reports of previous three meetings which were presented by the Registrar in the meeting, which started at 3.15 pm. The Chairman of the Board of Management requested the Secretary to Government, Department of Horticulture, to wait for some more time till the arrival of other members. But, Secretary to Government, insisted to start the meeting as there was a quorum. The following are the discussions held in detail and decisions taken.

| | |
|---|---|
| ಕಾರ್ಯಸೂಚಿ ಸಂಖ್ಯೆ 01 | ದಿನಾಂಕ 21-01-2019 ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 48ನೇ ಸಭೆಯ ನಡುವಳಿಗಳ ದೃಢೀಕರಣ. |
| | ಚರ್ಚೆ ಮತ್ತು ಠರಾವು :<br>ವ್ಯವಸ್ಥಾಪನಾ ಮಂಡಳಿಯ 48ನೇ ಸಭೆಯ ನಡುವಳಿಗಳ ಇತರೆ ಕಾರ್ಯಸೂಚಿ ಸಂ. 03 ಮತ್ತು 05ಕ್ಕೆ ಸಂಬಂಧಿಸಿದಂತೆ, ಶ್ರೀ ಎಸ್. ಎನ್. ಮಂಜುನಾಥಗೌಡ, ಗೌರವಾನ್ವಿತ ಸದಸ್ಯರು ಇವರಿಂದ ಸ್ವೀಕೃತವಾದ ಆಕ್ಷೇಪಣೆಯನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಮಂಡಿಸಿದರು. ಆಕ್ಷೇಪಣೆಯನ್ನು ಮತ್ತು ಮೇಲಿನ ಕಾರ್ಯಸೂಚಿಗಳಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದಿಂದ ಕೈಗೊಂಡ ಕ್ರಮಗಳನ್ನು ಪರಿಶೀಲಿಸಿ, ಮಂಡಳಿಯು ದಿನಾಂಕ 21-01-2019 ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 48ನೇ ಸಭೆಯ ನಡುವಳಿಗಳನ್ನು ದೃಢೀಕರಿಸಿತು. |
| **Item No.01** | **Confirmation of the minutes of the 48th meeting of the Board of Management held on 21-01-2019.** |
| | **Discussion and Resolution :**<br>The comments received from Hon'ble Member Sri. S. N. Manjunathgowda with regard to any other item No. 03 and 05 of 48th meeting of Board of Management were presented by the Member Secretary in the meeting. After going through the comments and action taken by the University for the above items, the Board confirmed the minutes of the 48th meeting of Board of Management held on 21-01-2019. |
| ಕಾರ್ಯಸೂಚಿ ಸಂ.02 | ದಿನಾಂಕ 21-01-2019 ರಂದು ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 48ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ. |
| | ಚರ್ಚೆ ಮತ್ತು ಠರಾವು :<br>ವಿಶ್ವವಿದ್ಯಾಲಯವು ತೆಗೆದುಕೊಂಡ ಕ್ರಮಗಳನ್ನು ಮಂಡಳಿಯು ಅವಲೋಕಿಸಿತು ಮತ್ತು ಅದರ ಪ್ರಗತಿಗೆ ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿತು. ಕೈಗೊಂಡ ಕ್ರಮಗಳಿಗೆ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು. |
| **Item No.02** | **Action taken report on the minutes of the 48th meeting of Board of Management held on 21-01-2019.** |
| | **Discussion and Resolution :**<br>The Board perused the action taken report and expressed its consent over the progress made. The Board accorded its approval for the actions taken. |

| | |
|---|---|
| ಕಾರ್ಯಸೂಚಿ ಸಂಖ್ಯೆ 03 | ದಿನಾಂಕ 26-02-2019 ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 49ನೇ ಸಭೆಯ ನಡುವಳಿಗಳ ಧೃಢೀಕರಣ. |
| | ಚರ್ಚೆ ಮತ್ತು ಠರಾವು :<br>ವ್ಯವಸ್ಥಾಪನಾ ಮಂಡಳಿಯ 49ನೇ ಸಭೆಯ ನಡುವಳಿಗಳ ಇತರೆ ಕಾರ್ಯಸೂಚಿ ಸಂಖ್ಯೆ 09ಕ್ಕೆ ಸಂಬಂಧಿಸಿದಂತೆ, ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ಗೌರವಾನ್ವಿತ ಸದಸ್ಯರು ಇವರಿಂದ ಸ್ವೀಕೃತವಾದ ಆಕ್ಷೇಪಣೆಯನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಮಂಡಿಸಿದರು. ಆಕ್ಷೇಪಣೆಯನ್ನು ಮತ್ತು ಮೇಲಿನ ಕಾರ್ಯಸೂಚಿಗಳಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದಿಂದ ಕೈಗೊಂಡ ಕ್ರಮಗಳನ್ನು ಪರಿಶೀಲಿಸಿ, ಮಂಡಳಿಯು ದಿನಾಂಕ 26-02-2019 ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 49ನೇ ಸಭೆಯು ನಡುವಳಿಗಳನ್ನು ದೃಢೀಕರಿಸಿತು. |
| **Item No.03** | **Confirmation of the minutes of the 49th meeting of the Board of Management held on 26-02-2019.** |
| | **Discussion and Resolution :**<br>The comments received from the Secretary to Government, Department of Horticulture and Member, with regard to any other item No. 09 of 49th meeting of Board of Management was presented for discussion during the meeting. After going through the comments and action taken by the University for the above items, the Board confirmed the minutes of the 49th meeting of Board of Management held on 26-02-2019. |
| ಕಾರ್ಯಸೂಚಿ ಸಂ.04 | ದಿನಾಂಕ 26-02-2019 ರಂದು ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 49ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ. |
| | ಚರ್ಚೆ ಮತ್ತು ಠರಾವು :<br>ವಿಶ್ವವಿದ್ಯಾಲಯವು ತೆಗೆದುಕೊಂಡ ಕ್ರಮಗಳನ್ನು ಮಂಡಳಿಯು ಅವಲೋಕಿಸಿತು ಮತ್ತು ಅದರ ಪ್ರಗತಿಗೆ ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿತು. ಕೈಗೊಂಡ ಕ್ರಮಗಳಿಗೆ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು. |
| **Item No.04** | **Action taken report on the minutes of the 49th meeting of Board of Management held on 26-02-2019.** |
| | **Discussion and Resolution :**<br>The Board perused the action taken report and expressed its consent over the progress made. The Board accorded its approval for the actions taken. |

| | |
|---|---|
| ಕಾರ್ಯಸೂಚಿ ಸಂ.05 | ದಿನಾಂಕ 22-03-2019 ರಂದು ಜರುಗಿದ 50ನೇ (ತುರ್ತು) ವ್ಯವಸ್ಥಾಪನ ಮಂಡಳಿಯ ಸಭೆಯ ನಡುವಳಿಗಳ ದೃಢೀಕರಣ. |
| | ಚರ್ಚೆ ಮತ್ತು ಠರಾವು: ದಿನಾಂಕ 22-03-2019 ರಂದು ಜರುಗಿದ 50ನೇ (ತುರ್ತು) ವ್ಯವಸ್ಥಾಪನ ಮಂಡಳಿಯ ಸಭೆಯ ನಡುವಳಿಗಳನ್ನು ಅಳವಡಿಸಿಕೊಳ್ಳಲು ಮಂಡಳಿಯು ದೃಢೀಕರಿಸಿತು. |
| **Item No.05** | **Confirmation of the minutes of the 50th (Emergent) meeting of the Board of Management held on 22-03-2019.** |
| | **Discussion and Resolution :** The minutes of the 50th (Emergent) meeting of Board of Management held on 22-03-2019 were confirmed for adoption. |
| ಕಾರ್ಯಸೂಚಿ ಸಂ.06 | ದಿನಾಂಕ 22-03-2019 ರಂದು ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 50ನೇ (ತುರ್ತು) ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ. |
| | ಚರ್ಚೆ ಮತ್ತು ಠರಾವು : ವಿಶ್ವವಿದ್ಯಾಲಯವು ತೆಗೆದುಕೊಂಡ ಕ್ರಮಗಳನ್ನು ಮಂಡಳಿಯು ಅವಲೋಕಿಸಿತು ಮತ್ತು ಅದರ ಪ್ರಗತಿಗೆ ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿತು. ಕೈಗೊಂಡ ಕ್ರಮಗಳಿಗೆ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು. |
| **Item No.06** | **Action taken report on the minutes of the 50th (Emergent) meeting of Board of Management held on 22-03-2019.** |
| | **Discussion and Resolution :** The Board perused the action taken report and expressed its consent over the progress made. The Board accorded its approval for the actions taken. |
| ಕಾರ್ಯಸೂಚಿ ಸಂ.07 | ಸಿ.ಎ.ಎಸ್. 2006 ರ ಅಡಿಯಲ್ಲಿ ಶಿಕ್ಷಕರಿಗೆ ಉನ್ನತೀಕರಿಸಲು ಅನುಮೋದನೆ ಕುರಿತು. |
| | ಚರ್ಚೆ ಮತ್ತು ಠರಾವು : ಮಂಡಳಿಯು, ಈ ಕಾರ್ಯಸೂಚಿಯನ್ನು ಪರಿಶೀಲಿಸಿ ಮತ್ತು ವಿವರವಾದ ಚರ್ಚೆಗಳ ನಂತರ, ಪರಿಶೀಲನಾ ಮತ್ತು ಮೌಲ್ಯಮಾಪನ ಸಮಿತಿಯಿಂದ ಶಿಫಾರಸ್ಸು ಮಾಡಲ್ಪಟ್ಟ ಶಿಕ್ಷಕರ ಬಡ್ತಿ ವಿಷಯವನ್ನು ಬಗೆಹರಿಸಲು ನಿರ್ಧರಿಸಿತು. ಮಂಡಳಿಯು, ನಿಗದಿತ ಸಮಯದೊಳಗೆ ಬಯೋಡೇಟಾವನ್ನು ಸಲ್ಲಿಸಿದವರಿಗೆ ಅರ್ಹತೆಯ ದಿನಾಂಕದ ಪ್ರಕಾರ ಸಿ.ಎ.ಎಸ್. ಬಡ್ತಿ ನೀಡಲು ಸೂಚಿಸಿತು. ನಿಗದಿತ ದಿನಾಂಕದ ನಂತರ ಬಯೋ-ಡೇಟಾವನ್ನು ಸಲ್ಲಿಸಿದವರಿಗೆ ಬಯೋಡಾಟಾ ಸಲ್ಲಿಸಿದ ದಿನಾಂಕವನ್ನು ಅರ್ಹತಾ ದಿನಾಂಕವೆಂದು ಪರಿಗಣಿಸಲು ತೀರ್ಮಾನಿಸಲಾಯಿತು. ಅಧ್ಯಕ್ಷರು, ಪರಿಶೀಲನಾ ಮತ್ತು ಮೌಲ್ಯಮಾಪನ ಸಮಿತಿಯ ಶಿಫಾರಸ್ಸುಗಳನ್ನು ಒಳಗೊಂಡಿರುವ ಮೊಹರು |

| | |
|---|---|
| | ಲಕೋಟೆಗಳನ್ನು ತೆರೆಯುವಂತೆ ಮತ್ತು ವಿವರಗಳನ್ನು ಓದುವಂತೆ ಸದಸ್ಯ ಕಾರ್ಯದರ್ಶಿಯವರಿಗೆ ತಿಳಿಸಲಾಯಿತು. ಆದರೆ, ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ಇವರು ವಿಶ್ವವಿದ್ಯಾಲಯದ ಮಟ್ಟದಲ್ಲಿಯೇ ಮೊಹರು ಲಕೋಟೆಗಳನ್ನು ತೆರೆಯಲು ಸಲಹೆ ನೀಡಿದರು. ವಾಡಿಕೆಯಂತೆ ಸದರಿ ಕಾರ್ಯವಿಧಾನಗಳನ್ನು ಮಂಡಳಿಯ ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳು ಸಮ್ಮುಖದಲ್ಲಿ ಕೈಗೊಳ್ಳುವುದು ಅವಶ್ಯವಿರುವ ಕಾರಣ, ಈ ಕಾರ್ಯಸೂಚಿಯನ್ನು ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.<br><br>(ಕ್ರಮ: ಕುಲಸಚಿವರು) |
| **Item No.07** | **Approval for up-gradation of teachers under CAS-2006 Scheme.** |
| | **Discussion & Resolution :**<br>The Board went through this item and after detailed deliberations, Board took a decision to clear the issue of promotion of teachers who have been recommended by the Assessment and Evaluation Committee. Board suggested to give effect for implementation of CAS promotions as per the date of eligibility to those who have submitted the Bio-data within the stipulated time. It was decided to consider date of submission as date of eligibility for those teachers who have submitted their Bio-data later than the stipulated date. The Chairman suggested the Member Secretary, to open the sealed covers containing the recommendations of the Assessment and Evaluation Committee, so as to read out the contents. However, this could not be accomplished as suggested by the Secretary to Government to follow such formal procedures at University level. But, Chairman suggested that, such formalities will be followed before the members who present in the meeting of the Board. Hence, it was decided to defer this item to the next meeting of the Board.<br><br>**(Action: Registrar)** |

| | |
|---|---|
| ಕಾರ್ಯಸೂಚಿ ಸಂ.08 | ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರನ್ನು ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ (ಹೆಚ್ಎಜಿ) ಹುದ್ದೆಗೆ ಉನ್ನತೀಕರಿಸಲು ಅನುಮೋದನೆಗಾಗಿ ಕುರಿತು. |
| | **ಚರ್ಚೆ ಮತ್ತು ಠರಾವು :**<br>ಸಿ.ಎ.ಎಸ್. – 2006 ರ ಅಡಿಯಲ್ಲಿ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ (ಹೆಚ್ಎಜಿ) ಹುದ್ದೆಗೆ ಬಡ್ತಿ ನೀಡಲು ಅನುಮೋದಿತ ಮಾರ್ಗಸೂಚಿಗಳನ್ನು ಅಧ್ಯಕ್ಷರು ಸದಸ್ಯರುಗಳಿಗೆ ವಿವರಿಸಿದರು. ಸಿ.ಎ.ಎಸ್. – 2006 ರ ಮಾರ್ಗಸೂಚಿಗಳ ಪ್ರಕಾರ ರಚಿಸಲಾದ ಸಮಿತಿಯ ಆಧಾರದ ಮೇಲೆ ಬಡ್ತಿ ಪಟ್ಟಿಯನ್ನು ಅನುಮೋದಿಸಲು ಶಿಫಾರಸ್ಸು ಮಾಡಲಾಗಿದೆ ಎಂದು ಅಧ್ಯಕ್ಷರು ಮಂಡಳಿಗೆ ತಿಳಿಸಿದರು. ಅದಾಗ್ಯೂ, ಸರ್ಕಾರದ ಕಾರ್ಯದರ್ಶಿಗಳು, ಸಿ.ಎ.ಎಸ್. 2006 ರ ಅಡಿಯಲ್ಲಿ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ (ಹೆಚ್.ಎ.ಜಿ.) ಹುದ್ದೆಗೆ ಬಡ್ತಿಗೆ ಸಂಬಂಧಿಸಿದ ವಿಷಯಗಳ ವಿವರಗಳನ್ನು ಪರಿಶೀಲಿಸುವ ಕುರಿತು; 1) ಕುಲಪತಿಗಳು, ಕೃವಿವಿ, ಬೆಂಗಳೂರು ಅಧ್ಯಕ್ಷತೆಯಲ್ಲಿ, 2) ಶಿಕ್ಷಣ ನಿರ್ದೇಶಕರು, ಕೃವಿವಿ, ಧಾರವಾಡ 3) ಕುಲಸಚಿವರು, ಕೃತೋವಿವಿ, ಶಿವಮೊಗ್ಗ ಸದಸ್ಯರುಗಳಾಗಿ ಮತ್ತು 4) ಕುಲಸಚಿವರು, ತೋವಿವಿ, ಬಾಗಲಕೋಟ ಸದಸ್ಯ ಸಂಚಾಲಕರಾಗಿ ಸಮಿತಿಯನ್ನು ರಚಿಸಲು ಸಲಹೆ ನೀಡಿದರು. ಆದರೆ, ಅಧ್ಯಕ್ಷರು ಸದರಿ ವಿಷಯ ಕುರಿತು ಮಾರ್ಗಸೂಚಿಗಳು ಸ್ಪಷ್ಟತೆಯಿಂದ ಕೂಡಿರುವುದರಿಂದ, ಮತ್ತೊಂದು ಸಮಿತಿಯನ್ನು ರಚಿಸುವ ಅಗತ್ಯವಿಲ್ಲ ಎಂದು ಸಭೆಗೆ ತಿಳಿಸಿದರು. ಈ ಕಾರಣಕ್ಕಾಗಿ, ಈ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.<br>(ಕ್ರಮ: ಕುಲಸಚಿವರು) |
| **Item No.08** | **Approval for up-gradation of teachers from Professor to Professor (HAG) under CAS-2006 Scheme.** |
| | **Discussion & Resolution :**<br>The Chairman briefed the approved guidelines for promotion from Professor to Professor (HAG) under CAS-2006 to the members. Further, Chairman, informed the Board that, the recommendations for approval of promotion list was based on the committee constituted as per the guidelines of CAS-2006. However, the Secretary to Government, suggested to constitute of committee consisting of 1) Vice-Chancellor, UAS, Bengaluru as Chairman and 2) Director of Education, UAS, Dharwad 3) Registrar, UAHS, Shivamogga as members and 4) Registrar, UHS, Bagalkot as Member Convener to go into the details of issues related to promotion from Professor to Professor (HAG) under CAS-2006. But, Chairman informed the Board that, there is no need to setup another committee to go into the |

| | |
|---|---|
| | details regarding the issues related to promotion from Professor to Professor (HAG). Hence, it was decided to place this item in the next meeting of the Board.<br><br>**(Action: Registrar)** |
| ಕಾರ್ಯಸೂಚಿ ಸಂ.09 | ಬೋಧಕರು, ಗ್ರಂಥಪಾಲಕರು ಹಾಗೂ ತತ್ಸಮಾನ ಹುದ್ದೆಗಳಿಗೆ ಪರಿಷ್ಕೃತ ಯುಜಿಸಿ/ಐಸಿಎಆರ್ ವೇತನ ಶ್ರೇಣಿಗಳನ್ನು ತೋವಿವಿ, ಬಾಗಲಕೋಟದಲ್ಲಿ ಅನುಷ್ಠಾನಗೊಳಿಸಿರುವುದನ್ನು ಸ್ಥಿರೀಕರಿಸುವ ಕುರಿತು ಮತ್ತು ತಾಂತ್ರಿಕ ಸಹಾಯಕರು ಮತ್ತು ತತ್ಸಮಾನ ಹುದ್ದೆಗಳಿಗೆ ಪರಿಷ್ಕೃತ ಯುಜಿಸಿ/ಐಸಿಎಆರ್ ವೇತನ ಶ್ರೇಣಿಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ಬೋಧಕರು, ಗ್ರಂಥಪಾಲಕರು ಹಾಗೂ ತತ್ಸಮಾನ ಹುದ್ದೆಗಳಿಗೆ ಪರಿಷ್ಕೃತ ಯುಜಿಸಿ/ಐಸಿಎಆರ್ ವೇತನ ಶ್ರೇಣಿಗಳನ್ನು ಕರ್ನಾಟಕ ಸರ್ಕಾರದ ಮತ್ತು ಯುಜಿಸಿ/ಐಸಿಎಆರ್, ನವದೆಹಲಿ ಆದೇಶಗಳನ್ವಯ ತೋವಿವಿ, ಬಾಗಲಕೋಟದಲ್ಲಿ ಅನುಷ್ಠಾನಗೊಳಿಸಿರುವುದನ್ನು ಸ್ಥಿರೀಕರಿಸಲು ವಿಶ್ವವಿದ್ಯಾಲಯದಿಂದ ತೆಗೆದುಕೊಂಡ ಕ್ರಮವನ್ನು ಪರಿಶೀಲಿಸಿತು. ಈ ಕುರಿತು, ಮಂಡಳಿಯು ಸದರಿ ಕ್ರಮವನ್ನು ಸ್ಥಿರೀಕರಿಸಿತು. ಮುಂದುವರೆದು, ಮಂಡಳಿಯು, ತಾಂತ್ರಿಕ ಸಹಾಯಕರು ಮತ್ತು ತತ್ಸಮಾನ ಹುದ್ದೆಗಳಿಗೂ ಸಹ ಪರಿಷ್ಕೃತ ಯುಜಿಸಿ/ಐಸಿಎಆರ್ ವೇತನ ಶ್ರೇಣಿಗಳನ್ನು ವಿಸ್ತರಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ: ಆಡಳಿತಾಧಿಕಾರಿಗಳು/ಹಣಕಾಸು ನಿಯಂತ್ರಣಾಧಿಕಾರಿಗಳು) |
| **Item No.09** | **Ratification for implementation of Revised UGC/ICAR Pay Scales to the Teachers, Librarians and equivalent cadres and approval for implementation of revised UGC/ICAR Pay Scales Technical Assistants and equivalent cadres in UHS, Bagalkot.** |
| | **Discussion & Resolution :**<br>The Board examined the action taken by the university regarding implementation of revised UGC/ICAR Pay Scales to the teachers, librarians and equivalent cadres in UHS, Bagalkot as per the orders of UGC/ICAR, New Delhi and Government of Karnataka. In this regard, Board ratified the same. Further, Board directed the University to extend the UGC/ICAR Pay Scales to the Technical Assistants and equivalent cadres in UHS, Bagalkot also.<br><br>**(Action: Administrative Officer/Comptroller)** |

| | |
|---|---|
| ಕಾರ್ಯಸೂಚಿ ಸಂ.10 | ಡಾ. ಕೆ.ಎನ್.ಕಟ್ಟಿಮನಿ, ಪ್ರಾಧ್ಯಾಪಕರು ಹಾಗೂ ಕುಲಸಚಿವರು (ಪ್ರಭಾರಿ), ತೋ.ವಿ.ವಿ.ಬಾಗಲಕೋಟಹಾಗೂ ಡಾ. ಅಶೋಕ ಎಸ್. ಆಲೂರ, ವಿಶೇಷಾಧಿಕಾರಿಗಳು, ಪ್ರಾದೇಶಿಕ ಕಚೇರಿ, ಬೆಂಗಳೂರು ಇವರು ಕ್ರಮವಾಗಿ ಕೃ.ವಿ.ವಿ. ರಾಯಚೂರ ಹಾಗೂ ಭಾರತೀಯ ಇಂಜನಿಯರಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಆವಿಷ್ಕಾರ ವಿಶ್ವವಿದ್ಯಾಲಯ, ಅನಂತಪುರ ಆಂಧ್ರಪ್ರದೇಶ ಇಲ್ಲಿಗೆ ಸಾವಧಿಕ ಹುದ್ದೆಯ ಮೇಲೆ ಕುಲಪತಿಗಳಾಗಿ ನೇಮಕಾತಿ ಹೊಂದಿರುವ ಪ್ರಯುಕ್ತ ಸದರಿಯವರ ಹುದ್ದೆಯನ್ನು ಲೀನ್ ಮೇಲಿರಿಸಿ ಬಿಡುಗಡೆಗೊಳಿಸಿರುವುದನ್ನು ಸ್ಥಿರೀಕರಣಗೊಳಿಸುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ಡಾ. ಕೆ.ಎನ್.ಕಟ್ಟಿಮನಿ, ಪ್ರಾಧ್ಯಾಪಕರು ಹಾಗೂ ಕುಲಸಚಿವರು (ಪ್ರಭಾರಿ), ತೋ.ವಿ.ವಿ.ಬಾಗಲಕೋಟಹಾಗೂ ಡಾ. ಅಶೋಕ ಎಸ್. ಆಲೂರ, ವಿಶೇಷಾಧಿಕಾರಿಗಳು, ಪ್ರಾದೇಶಿಕ ಕಚೇರಿ, ಬೆಂಗಳೂರು ಇವರು ಕ್ರಮವಾಗಿ ಕೃ.ವಿ.ವಿ. ರಾಯಚೂರ ಹಾಗೂ ಭಾರತೀಯ ಇಂಜನಿಯರಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಆವಿಷ್ಕಾರ ವಿಶ್ವವಿದ್ಯಾಲಯ, ಅನಂತಪುರ ಆಂಧ್ರಪ್ರದೇಶ ಇಲ್ಲಿಗೆ ಸಾವಧಿಕ ಹುದ್ದೆಯ ಮೇಲೆ ಕುಲಪತಿಗಳಾಗಿ ನೇಮಕಾತಿ ಹೊಂದಿರುವ ಪ್ರಯುಕ್ತ ಸದರಿಯವರ ಹುದ್ದೆಯನ್ನು ಲೀನ್ ಮೇಲಿರಿಸಿ ಬಿಡುಗಡೆಗೊಳಿಸಲು ವಿಶ್ವವಿದ್ಯಾಲಯದಿಂದ ತೆಗೆದುಕೊಂಡ ಕ್ರಮವನ್ನು ಪರಿಶೀಲಿಸಿತು. ವಿವರವಾದ ಚರ್ಚೆಗಳ ನಂತರ, ಮಂಡಳಿಯು ಈ ಕುರಿತು ವಿಶ್ವವಿದ್ಯಾಲಯದಿಂದ ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸಿತು.<br>(ಕ್ರಮ: ಆಡಳಿತಾಧಿಕಾರಿಗಳು) |
| **Item No.10** | **Ratification of action taken by the university regarding relief of Dr. K. N. Kattimani, Professor and Registrar (I/c.) and Dr. Ashok S. Alur, Special Officer, Regional Office, Bengaluru on lien in view of their selection as Vice-Chancellors of UAS, Raichur and B.E.S.T. Innovation University, Anantapur, Andra Pradesh respectively.** |
| | **Discussion & Resolution :**<br>The Board examined the action taken by the university regarding relief of Dr. K. N. Kattimani, Professor and Registrar (I/c.) and Dr. Ashok S. Alur, Special Officer, Regional Office, Bengaluru on lien in view of their selection as Vice-Chancellors of UAS, Raichur and B.E.S.T. Innovation University, Anantapur, Andra Pradesh respectively. After detailed deliberations, Board ratified the action taken by the University in this regard.<br>**(Action: Administrative Officer)** |

| | |
|---|---|
| ಕಾರ್ಯಸೂಚಿ ಸಂ.11 | **ತೋಟಗಾರಿಕಾ ಮಹಾವಿದ್ಯಾಲಯ ಕೋಲಾರ ಆವರಣದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಆಡಳಿತ ಕಟ್ಟಡದ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ಮಂಡಳಿಯು ಕೋಲಾರದಲ್ಲಿ ಕೃಷಿ ವಿಜ್ಞಾನ ಕೇಂದ್ರಕ್ಕೆ ಆಡಳಿತ ಕಟ್ಟಡ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿತು. ಐಸಿಎಆರ್, ನವದೆಹಲಿಯು ಆರ್ಥಿಕ ವರ್ಷ (2019-20) ರಲ್ಲಿ ಕೆವಿಕೆ, ಕೋಲಾರದ ಆಡಳಿತ ಕಟ್ಟಡ ನಿರ್ಮಾಣಕ್ಕಾಗಿ ರೂ. 49.86 ಲಕ್ಷಗಳು ಹಂಚಿಕೆ ಆಗಿರುವ ಕುರಿತು ವಿವರವಾದ ಚರ್ಚೆಗಳ ನಂತರ, ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು. ಮುಂದುವರೆದು, ಮಂಡಳಿಯು ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಆಹ್ವಾನಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br><br>(ಕ್ರಮ: ಆಸ್ತಿ ಅಧಿಕಾರಿಗಳು) |
| **Item No.11** | **Accordal of approval for inviting tender for construction of Administrative Building for Krishi Vigyan Kendra at Kolar.** |
| | **Discussion & Resolution :**<br><br>The Board went through the proposal for inviting tender for construction of Administrative Building for Krishi Vigyan Kendra at Kolar. After detailed deliberations, Board accorded its approval for the same, as ICAR has allotted Rs. 49.86 lakhs for the purpose of construction of administrative building during this financial year (2019-20) of KVK, Kolar. Further, Board directed the University to invite the tender in this regard as per norms of UHS and KTPP Act.<br><br>**(Action: Estate Officer)** |
| ಕಾರ್ಯಸೂಚಿ ಸಂ.12 | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ, ಮುಖ್ಯ ಆವರಣದ ಮುಖ್ಯ ಪ್ರವೇಶ ದ್ವಾರ ಕಾಮಗಾರಿಯ ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ನೀಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ಮಧ್ಯಾಹ್ನ 3.40 ಕ್ಕೆ ಕುಲಸಚಿವರು ಈ ಕಾರ್ಯಸೂಚಿಯನ್ನು ಪ್ರಸ್ತುತಪಡಿಸುವಾಗ, ಅಧಿಕಾರೇತರ ಸದಸ್ಯರುಗಳು ಸಭಾ ಕೊಠಡಿಗೆ ಪ್ರವೇಶಿಸಿದರು. ಅಧ್ಯಕ್ಷರು, 2017 ರಲ್ಲಿ ಮಾಜಿ ಕುಲಪತಿಗಳ ಅವಧಿಯಲ್ಲಿ ಬಾಗಲಕೋಟ ಆವರಣದಲ್ಲಿ ಕೈಗೊಳ್ಳಲಾದ ಸಿವಿಲ್ ಕಾಮಗಾರಿಗಳ (ಮುಖ್ಯ ದ್ವಾರದ ನಿರ್ಮಾಣ) ಕುರಿತು ವಿವರಿಸಿದರು. ಹಿಂದಿನ ಖಾಯಂ ಕುಲಪತಿಗಳು ಮೇಲಿನ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡ ನಂತರ ಒಂದು ವರ್ಷಕ್ಕೂ ಹೆಚ್ಚು ಕಾಲ ಸೇವೆಯಲ್ಲಿದ್ದರೂ, ಸದರಿ |

| | |
|---|---|
| | ಅವಧಿಯಲ್ಲಿ ಈ ವಿಷಯವನ್ನು ಮಂಡಳಿಯ ಗಮನಕ್ಕೆ ತಂದಿರುವುದಿಲ್ಲ. ಕೆಲಸ ಪೂರ್ಣಗೊಂಡ ದಿನಾಂಕದಿಂದ ಒಂದು ವರ್ಷದವರೆಗೆ ಯಾವುದೇ ಪ್ರಸ್ತಾವನೆಯನ್ನು ಮಂಡಳಿಯ ಗಮನಕ್ಕೆ ತಂದಿರುವುದಿಲ್ಲ. ಈ ಕುರಿತು ಸರ್ಕಾರದ ಕಾರ್ಯದರ್ಶಿಗಳು, ಸಿವಿಲ್ ಕಾಮಗಾರಿಗಳ ವಿವರಗಳನ್ನು ಮತ್ತು ಸಂಬಂಧಪಟ್ಟವರಿಂದ ಉಂಟಾದ ನಷ್ಟಗಳು ಮತ್ತು ಬಿಲ್‌ಗಳ ಪಾವತಿಯಲ್ಲಿ ವಿಳಂಬವಾಗಿರುವುದನ್ನು ಪರಿಶೀಲಿಸಲು ಸಮಿತಿಯನ್ನು ರಚಿಸುವಂತೆ ಸೂಚಿಸಿದರು. ಸದರಿ ಕಾಮಗಾರಿಯು ಒಂದು ವರ್ಷದ ಹಿಂದೆಯೇ ಪೂರ್ಣಗೊಂಡಿದ್ದರೂ, ಗುತ್ತಿಗೆದಾರರಿಗೆ ಬಿಲ್ಲನ್ನು ಪಾವತಿ ಮಾಡಲು ವಿಳಂಬವಾಗಿದ್ದೇಕೆ? ಎಂದು ಗೌರವಾನ್ವಿತ ಸದಸ್ಯರಾದ ಶ್ರೀ ಆರ್. ಚೌಡಾ ರೆಡ್ಡಿ ತೂಪಲ್ಲಿರವರು ಪ್ರಶ್ನಿಸಿದರು. ಮುಂದುವರೆದು, ಮಂಡಳಿಯು ಎಲ್ಲ ಕಾರ್ಯಸೂಚಿಗಳನ್ನು *[ಕಾರ್ಯಸೂಚಿ ಸಂ. 01 ರಿಂದ 06 (ಹಿಂದಿನ ಸಭೆಗಳ ನಡುವಳಿಗಳ ದೃಢೀಕರಣ & ಕೈಗೊಂಡ ಕ್ರಮಗಳ ವರದಿಗಳು) ಮತ್ತು 09, 10 & 11 ಗಳನ್ನು ಹೊರಡುಪಡಿಸಿ]*, ಮುಂದಿನ ಮಂಡಳಿಯ ಸಭೆಯಲ್ಲಿ ಮಂಡಿಸಲು ನಿರ್ಧರಿಸಿತು.<br>(ಕ್ರಮ: ಕುಲಸಚಿವರು) |
| **Item No.12** | **Approval to the additional and revised cost of construction of main entrance gate of UHS, Bagalkot.** |
| | **Discussion & Resolution :**<br>During the presentation of this agenda item by the Registrar, non-official members entered in the meeting hall at 3.40 pm. The Chairman of the Board briefed about civil works (construction of main gate) carried out at Bagalkot campus during the period of former & regular Vice-Chancellor in 2017. Though the previous regular Vice-Chancellor was in service, for more than one year after the completion of the aforesaid civil works, but this item was not brought to the notice of the Board during that period. There was no proposal moved to the Board in this matter, as there has been a gap of one year from the date of completion of work. In view of this, Secretary to Government suggested to constitute a committee to look into the details of civil works, lapses on the part of concern persons and also inordinate delay in payment of bills. Hon'ble member Sri R. Chowda Reddy Thoopalli, questioned why there was a delay in the settlement of final bill to the contractor? since the work was completed one year back. Further, Board took a decision to place all the agenda items *[except Item No. 01 to 06* |

| | |
|---|---|
| | *(confirmation & action taken reports of previous meetings) and 09, 10 & 11]* in the next meeting of the Board.<br>**(Action: Registrar)** |

ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ

**Registrar & Member Secretary**
**Board of Management, UHS, Bagalkot**